ಹಾವು ಕಡಿತಕ್ಕೆ ಚಿಕಿತ್ಸೆ

97 - ಶ್ರೀ ಯು.ಬಿ. ಬಣಕರ್ (ಹಿರೆಕೆರೂರ ಕ್ಷೇತ್ರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಇತ್ತೀಚೆಗೆ ಹುಬ್ಬಳ್ಳಿ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಹಾವು ಕಚ್ಚಿದ ವಿದ್ಯಾರ್ಥಿನಿಗೆ ಚಿಕಿತ್ಸೆ ಕೊಡಲು ಇಂಜೆಕ್ಷನ್ ಟ್ಯೂಬ್ ಇಲ್ಲದ ಕಾರಣ ಆಕೆ ನಿಧನವಾದದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?*
2. *ಮುಂಬಯಿ ಹ್ಯಾಫ್‌ಕಿನ್ ಸಂಸ್ಥೆಯಿಂದ ಹಾವು ಕಡಿತದ ಟ್ಯೂಬನ್ನು ರಾಜ್ಯಸರ್ಕಾರದ ಎಲ್ಲಾ ಆಸ್ಪತ್ರೆಗಳಲ್ಲಿ ಸಂಗ್ರಹವಾಗಿಡಲು ತಿರಿಸುತ್ತಿದ್ದು ಈಗ ಅವುಗಳನ್ನು ತರಿಸಿ ಎಲ್ಲಾ ಆಸ್ಪತ್ರೆಗಳಲ್ಲಿ ಇಡದಿರಲು ಕಾರಣವೇನು?*
3. *ರಾಜ್ಯದಲ್ಲಿ ಹಾವು ಕಡಿತದಿಂದ 1991-92 , 1992-93, 1993-94 ಮತ್ತು 1994-95 ರಲ್ಲಿ ಸತ್ತವರ ಸಂಖ್ಯೆ ಹಾಗೂ ಚಿಕಿತ್ಸೆ ನಂತರ ಉಳಿದವರ ಸಂಖ್ಯೆ ಎಷ್ಟು?*

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

1. ತಾ. 17-11-1994ರಂದು ಕುಮಾರಿ ಗೋಯಲ್ ವಯಸ್ಸು 22 ವರ್ಷ ಇಂಜಿನಿಯರಿಂಗ್ ವಿದ್ಯಾರ್ಥಿನಿ ಇವರು ಹಾವು ಕಚ್ಚಿದೆಯೆಂದು ಆ ಸಮಯದಲ್ಲಿ ಸದರಿ ಆಸ್ಪತ್ರೆಯಲ್ಲಿ ಆಂಟಿ ಸ್ನೇಕವೆನ್‌ವ್ ಔಷಧಿ ಲಭ್ಯವಿಲ್ಲದೆ ಅದನ್ನು ಪಡೆಯಲು ಪ್ರಯತ್ನಿಸುತ್ತಿದ್ದಾಗ ಸದರಿ ವಿದ್ಯಾರ್ಥಿನಿಯವರು ನಿಧನರಾಗಿರುತ್ತಾರೆ.

2. ಹಾಲಿ ಇರುವ ನಿಬಂಧನೆಗಳ ಪ್ರಕಾರ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಶೇ. 40ರ ಅನುದಾನದಲ್ಲಿ ಮುಂಬಯಿ ಹ್ಯಾಫಕಿನ್ ಇನ್ಸ್ಟಿಟ್ಯೂಟ್‌ನಿಂದ ಆಂಟಿ ಸ್ನೇಕವೆನಮ್ ಔಷಧಿಯನ್ನು ಸಾಕಷ್ಟು ಪ್ರಮಾಣದಲ್ಲಿ ನೇರವಾಗಿ ಖರೀದಿಸಿ ಸಂಗ್ರಹವಿಡಬೇಕು. ಈ ನಿಬಂಧನೆಯನ್ನು ಬಹಳಷ್ಟು ಸರ್ಕಾರಿ ಆಸ್ಪತ್ರೆಗಳು ಪಾಲಿಸುತ್ತಿದ್ದು, ಕೆ.ಎಂ.ಸಿ. ಹುಬ್ಬಳ್ಳಿ ಆಸ್ಪತ್ರೆಯವರು ಕಲ್ಕತ್ತಾದ ಬೆಂಗಾಲ್ ಕೆಮಿಕಲ್ಸ್ ಸಂಸ್ಥೆಯಿಂದ ಸದರಿ ಔಷಧಿಯನ್ನು ಪಡೆಯಲು ಪ್ರಯತ್ನಿಸುತ್ತಿದ್ದ ಕಾರಣ ಮುಂಬಯಿನ ಹ್ಯಾಫ್‌ಕಿನ್ ಸಂಸ್ಥೆಯಿಂದ ಈ ಔಷಧಿಯನ್ನು ಖರೀದಿಸಿ ಸಂಗ್ರಹವಾಗಿಡಲು ಆಗಲಿಲ್ಲ.

ವರ್ಷ	ಸತ್ತವರು	ಬದುಕುಳಿದವರು
1991	168	4098
1992	141	4741
1993	116	5794
1994	108	4164

ತಾತ್ಕಾಲಿಕ ಕೆಲವು ಆಸ್ಪತ್ರೆಗಳಿಂದ ಮಾಹಿತಿ ಬಂದಿರುವುದಿಲ್ಲ.

ಅಭಯಾರಣ್ಯ ಯೋಜನೆಗಳು

285 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ್) : ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜುಪಿಡಾ ಅಭಿವೃದ್ಧಿಯ ಅಭಯಾರಣ್ಯ ಯೋಜನೆಗಳೇನು ಹಾಗೂ ಈ ಯೋಜನೆಯ ಕಾರ್ಯ ವ್ಯಾಪ್ತಿಗಳೇನು?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಮಂತ್ರಿಗಳು) :

ಸುಫಾ ಯೋಜನೆಯಿಂದಾಗಿ ಆಶ್ರಯ ಕಳೆದುಕೊಂಡ ಜನರನ್ನು ಜೊಯಿಡಾ ಪ್ರದೇಶಕ್ಕೆ ಸ್ಥಳಾಂತರಿಸಿ ಅವರಿಗೆ ಪುನರ್‌ವಸತಿ ಕಲ್ಪಿಸಲಾಗಿದೆ. ಆದ್ದರಿಂದ ಜೋಯಿಡಾ